
ತಲಿಬರಹ ಕೊಟ್ಟಿರತಾರ. ಹಳೇ ಹಿಂದಿ ಸಿನಿಮಾದ ಹಾಡುಗಳನ್ನ ಕನ್ನಡೀಕರಿಸಿ ಅದು ತಮ್ಮದೇ ಶಾಯರಿ ಎಂದು ಹಾಕಿ ಬಿಂಬಿಸಿ ಲೈಕುಗಳನ್ನು ಬಾಚುವವರು ಇದ್ದಾರ. ಕಾರಂತರ, ಭೈರಪ್ಪನವರ ಕಾದಂಬರಿಗಳನ್ನು ರಾಶಿ ಹಾಕಿ ನಡುವೆ ತಮ್ಮ ಮುಖ ತೂರಿಸಿ ಪೋಸು ಕೊಡುವ ಮಹಾನುಭಾವರಿದ್ದಾರೆ. ತಮ್ಮ ಹಿಂದಿನ ಜನ್ಮ ಮುಂದಿನ ಜನ್ಮ ಜಾಲಾಡಿಕೋತ ಮಂಗ್ಯಾ ಅದವರಿದ್ದಾರ. ಬಾಯಿಗೆ ಬಂದದ್ದು ಮಾತಾಡೋವರಿದ್ದಾರ. ಆದರ ಹೀಂಗ ಮಜಾ ಮಜಾ ಮುಖವಾಡದ ಮಂದಿ ಇರತಾರಂತ ಜಗತ್ತs ಕೆಟ್ಟದು ಅನ್ನಲಿಕ್ಕಾಗತದೇನು? ಒಳ್ಳೇದನ್ನ ಹುಡುಕುವ ಜಾಣ್ಮೆ ಮಾತ್ರ ನಿಮಗ ಬೇಕೇ ಬೇಕು! ನಿಜವಾದ ಪ್ರತಿಭಾನ್ವಿತರು ನನಗ ಈ 'ಮೊ. ಹೋ' ಮೂಲಕ ನನಗ ಪರಿಚಯ ಆಗ್ಯಾರ. ಎಂತೆಂಥಾ ಬರಹಗಾರರು, ಚಿತ್ರಗಾರರು,ಕಲಾವಿದರು ನನಗ ಪರಿಚಯವಾದದ್ದು ಈ ಈ ಲೋಕದಲ್ಲೇ. ಆದರೂ ವೈಯಕ್ತಿಕ ಪರಿಚಯ ಇಲ್ಲದಿದ್ರ ಸ್ನೇಹಹಸ್ತ ಚಾಚುವುದು ನನಗ ಅಷ್ಟಕ್ಕಷ್ಟ. ಈ ಮಯಾ ಜಗತ್ತಿನ ಪ್ರತಿ ವಸ್ತುಗಳನ್ನೂ ನಾನು ಮಾತ್ರ ಖಂಡಿತವಾಗಿಯೂ ಸಂಶಯ ದೃಷ್ಟಿಯಿಂದನೇ ನೋಡುತ್ತೇನೆ. ಹೆಚ್ಚೇಕೆ? ಸ್ವತಹ ನನ್ನನ್ನೂ ನಾನು ಇಲ್ಲಿ ನಂಬುವುದಿಲ್ಲ. ತಲೀಗೆ ಬಣ್ಣ ಹಾಕಿಗೋಳಲಾರದ ಫೋಟೊ ನಾ ಈ ಮೊಗಹೊತ್ತಿಗೇ ಮ್ಯಾಲೆ ಹಾಕ್ಕೋತೀನೇನೂ?... ಹೋಗಲಿ ಅಗದೀ ಲೇಟೆಸ್ಟ್ ಫೋಟೊ ನರೇ ಹಾಕ್ಕೋತೇನೇನೂ? ಇಲ್ಲಪ್ಪಾ! ಯಾವತ್ತೋ ಎಲ್ಲೋ ತೆಗೆದ ಇದ್ದದ್ದರಾಗ ಅಗದೀ ಛಂದ ಕಾಣಿಸೋ ಫೋಟೊ ಮಾತ್ರ ಹಾಕ್ಕೋತೀನಿ.




ಈ ಮುಖ ಪುಸ್ತಕ ಬಂದಮ್ಯಾಲೆ ಕ್ಯಾಮೆರಾ ಇರೋ ಅವರಷ್ಟೂರು ಹವ್ಯಾಸಿ ಫೋಟೋಗ್ರಾಫರ್ಗಳಾಗಿಬಿಟ್ಟರು. ವಗದ್ದ ಅರಿಬಿ ವಣಾಹಾಕೋ ತಂತೀ ಮ್ಯಾಲೆ ಒಂದು ಕಾಗಿ ಕುಂತ್ಯ?!... ತಗಿ ಫೋಟೊ... ಮನ್ಯಾಗಿನ ಎರಡು ಪಾಟಿನ್ಯಾಗ ಒಂದರಾಗ ಗುಲಾಬಿ ಮಗ್ಗಿ ಬಿಟ್ಟಿತ?! ತಗಿ ಫೋಟೊ?! ಮನ್ಯಾಗಿನ ಸಣ್ಣ ಕೂಸಿಗೆ ಹಲ್ಲು ಬಂತ?! ತಗಿ ಫೋಟೊ?! ಎಷ್ಟ್ ಫೋಟೊ ಎಂತನಾ?

ಇನ್ನ ಕೆಲವ ಮಂದಿ ತಾವು ಎಲ್ಲೆ ಇದ್ದೀವಿ ಅನ್ನೋದು ಸುದ್ದಾ ಈ ಬುಕ್ಕಿನ ಮ್ಯಾಲೆ ಅಪ್ ಡೇಟ್ ಮಾಡತಾರ್ರೀಪಾ. ಈಟಿಂಗ್ ಪಾಣಿಪೂರಿ ಅಟ್ ಹೋಮ್, ಡ್ರಿಂಕಿಂಗ್ ಟಿ ಎಟ್ ಲೀಲಾ ಪ್ಯಾಲೇಸ್, ಟ್ರಾವೆಲಿಂಗ್ ಟು ಝುಮರೀತಲಯ್ಯಾ ಅಟ್ ಕೆಂಪೇಗೌಡ ಇಂಟರ್‌ನ್ಯಾಷನಲ್ ಏರ್ ಪೋರ್ಟ್ ಟರ್ಮಿನಲ್ ನಂಬರ್ ವನ್... ಎಲಾ ಇವನ?! ಇವರೆಲ್ಲರ ಹೋಗವಲ್ಯಾಕ?! ನಾವೇನ್ ಮಾಡೋಣು? ಇವರು ಹೋದದ್ದು ಅಥವಾ ಹೊಂಟದ್ದು ನೋಡಿ ಸಂತಸಪಡೋ ಅಷ್ಟರಾಗ ಕ್ಯಾಂಡಿ ಕ್ರಷ್ನು ಆಡಲಿಕ್ಕೆ ಆಹ್ವಾನ.